# ಕರ್ನಾಟಕ ಸರ್ಕಾರ

ಸಂ.SFS-5/ಬಿಟಿಎವಿ/ಮಾ.ಸೂ/ಮು-15/2015-16

ಕೃಷಿ ಇಲಾಖೆ,
ಶೇಷಾದ್ರಿ ರಸ್ತೆ, ಬೆಂಗಳೂರು,
ದಿನಾಂಕ: 22-05-2015.

## ಸುತ್ತೋಲೆ - 5

ವಿಷಯ:- 2015ರ ಮುಂಗಾರು ಹಂಗಾಮಿನಲ್ಲಿ ಇಲಾಖಾ ಕಾರ್ಯಕ್ರಮಗಳಡಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿಯ ಇದೇ ಸಮ ಸಂಖ್ಯೆಯ ಸುತ್ತೋಲೆ-1, ದಿನಾಂಕ 08-04-2015.
2. ಮೆ: ಕಾಂಚನ ಗಂಗಾ ಸೀಡ್ ಕಂಪನಿ ಪ್ರೈ. ಲಿ., ಇವರ ಪತ್ರದ ದಿನಾಂಕ: 13.04.2015.

***

2015ರ ಮುಂಗಾರು ಹಂಗಾಮಿನಲ್ಲಿ ಇಲಾಖಾ ಕಾರ್ಯಕ್ರಮಗಳಡಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸುವ ಬಗ್ಗೆ ಬೆಳೆವಾರು ನೀಡಬಹುದಾದ ರಿಯಾಯಿತಿ ದರ (ಪ್ರತಿ ಕೆ. ಜಿ. ಗೆ) ಮಾರಾಟ ದರ ಮತ್ತು ಬೀಜ ಪೂರೈಕೆ ಸಂಸ್ಥೆಗಳ ವಿಳಾಸವನ್ನು ಈಗಾಗಲೇ ಉಲ್ಲೇಖ-1ರ ಸುತ್ತೋಲೆ-1 ರಲ್ಲಿ ತಿಳಿಸಿದೆ.

ಮುಂದುವರೆದು, ಮೆ: ಕಾಂಚನ ಗಂಗಾ ಸೀಡ್ ಕಂಪನಿ ಪ್ರೈ. ಲಿ., ದಾವಣಗೆರೆ ಇವರು ತಮ್ಮ ಉಲ್ಲೇಖಿತ-2ರ ಪತ್ರದಲ್ಲಿ ಇಲಾಖೆಗೆ ಮನವಿಯನ್ನು ಸಲ್ಲಿಸಿ, ಮೆಕ್ಕೆಜೋಳ ಬೆಳೆಯ ಈ ಕೆಳಕಂಡ ತಳಿಗಳಿಗೆ ಮಾರಾಟ ದರವನ್ನು ಪರಿಷ್ಕರಿಸಿಕೊಡಬೇಕೆಂದು ಕೋರಿರುತ್ತಾರೆ. ಆದುದರಿಂದ, ಈ ಕೆಳಗಿನಂತೆ ದರವನ್ನು ಪರಿಷ್ಕರಿಸಲಾಗಿರುತ್ತದೆ.

| ಕ್ರ. ಸಂ | ಸಂಸ್ಥೆ | ಬೆಳೆ | ತಳಿ | ಬಿತ್ತನೆ ಬೀಜದ ಹಂತ | ದಿನಾಂಕ: 8-4-2015ರ ಸುತ್ತೋಲೆ-1ರ ಪ್ರಕಾರ ನಿಗಧಿ ಪಡಿಸಲಾದ ಮಾರಾಟದ ದರ (ರೂ. ಪ್ರತಿ ಕ್ವಿಂಟಾಲ್‌ಗೆ) | ಅಂಗೀಕರಿಸಲಾದ ಪರಿಷ್ಕೃತ ಮಾರಾಟದ ದರ (ರೂ. ಪ್ರತಿ ಕ್ವಿಂಟಾಲ್‌ಗೆ) |
|---|---|---|---|---|---|---|
| 1 | ಮೆ: ಕಾಂಚನ ಗಂಗಾ ಸೀಡ್ ಕಂಪನಿ ಪ್ರೈ. ಲಿ. | ಮೆಕ್ಕೆಜೋಳ | KH-517 Gold | ನಿಜಚೀಟಿ | 9600=00 | 9000=00 |
| 2 | ಮೆ: ಕಾಂಚನ ಗಂಗಾ ಸೀಡ್ ಕಂಪನಿ ಪ್ರೈ. ಲಿ. | ಮೆಕ್ಕೆಜೋಳ | KH-2001 | ನಿಜಚೀಟಿ | 9600=00 | 9000=00 |

2015ರ ಮುಂಗಾರು ಹಂಗಾಮಿನಲ್ಲಿ ರಿಯಾಯಿತಿ ದರದಲ್ಲಿ ಬೀಜ ವಿತರಿಸಲು, ನೀಡಲಾಗಿರುವ ಮಾರ್ಗಸೂಚಿಯ ಅಂಶಗಳನ್ನು ಅನುಸರಿಸಿ ಸಮರ್ಪಕವಾಗಿ ಅನುಷ್ಠಾನಗೊಳಿಸುವುದು. ಬೀಜ ವಿತರಣಾ ಪ್ರಗತಿಯನ್ನು ಕಾಲಕಾಲಕ್ಕೆ ತಪ್ಪದೇ ಕೇಂದ್ರ ಕಛೇರಿಗೆ ನಿಗಧಿತ ನಮೂನೆಯಲ್ಲಿ ಕಳುಹಿಸಿಕೊಡಲು ಸೂಚಿಸಿದೆ.

*ಕಡತದ ಟಿಪ್ಪಣಿ ಸಂ: 13ರಲ್ಲಿ ಕೃಷಿ ನಿರ್ದೇಶಕರು ಅನುಮೋದಿಸಿರುತ್ತಾರೆ.*

ಕೃಷಿ ನಿರ್ದೇಶಕರ ಪರವಾಗಿ

1. ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರತಿಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಪ್ರತಿಯನ್ನು ಮೆ: ಕಾಂಚನ ಗಂಗಾ ಸೀಡ್ ಕಂಪನಿ ಪ್ರೈ. ಲಿ., #1659/17, 1ನೇ ಮುಖ್ಯರಸ್ತೆ, 2ನೇ ಕ್ರಾಸ್, ತರಳಬಾಳು ಬಡಾವಣೆ, ವಿದ್ಯಾನಗರ, ದಾವಣಗೆರೆ-577005 ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.